

# ‘ಕಡಿಮೆ ಅಂಕ’ ಎಂಬ ಕಾಯಿಲೆಯ ಹಿಂದೆ!

ಕೋವಿಡ್‌ನಿಂದ ಸಂಪೂರ್ಣ ಹದಗೆಟ್ಟಿದ್ದ ಶಾಲಾ ಶಿಕ್ಷಣ ವ್ಯವಸ್ಥೆ ಅಲ್ಲೋಲಕಲ್ಲೋಲವಾಗಿದೆ. ಮಕ್ಕಳ ಓದಿನ ಸಮಸ್ಯೆ ಈಗ ಮತ್ತೆ ಹೊಸ ರೂಪಗಳಲ್ಲಿ, ಹಲವು ವಿಧಗಳಲ್ಲಿ ಕಾಣಿಸಲಾರಂಭಿಸಿವೆ. ಇದು ಮಕ್ಕಳ ಮಾನಸಿಕ ಆರೋಗ್ಯಕ್ಕೆ ಮಾರಕವೆನಿಸಿದೆ.

‘ಕಡಿಮೆ ಅಂಕ’ ಎಂಬ ಸಮಸ್ಯೆಯೇ ಒಂದು ಕಾಯಿಲೆ ಎನ್ನುವಷ್ಟರ ಮಟ್ಟಿಗೆ ಶಾಲೆಗಳೂ, ಅಂಕಗಳು ತಳುಕು ಹಾಕಿಕೊಂಡಿವೆ. ಹಾಗೆ ನೋಡಿದರೆ ಶಾಲೆಯಿಂದ, ಶಾಲೆಯಲ್ಲಿ ನಡೆಯುವ ಶಿಸ್ತು ಆಟ ಇತ್ಯಾದಿಗಳಿಂದಲೂ ಉಪಯೋಗವಿದೆ ಎಂಬುದು ನಮಗೆಲ್ಲರಿಗೂ ಅರಿವಾದದ್ದೇ ಕೋವಿಡ್ ಸಮಯದಲ್ಲಿ ಶಾಲೆಗಳು ಬಾಗಿಲು ಮುಚ್ಚಿದ್ದರಿಂದ ಎನ್ನಬಹುದು. ‘ಕಡಿಮೆ ಅಂಕ’ ಎಂಬ ಸಮಸ್ಯೆಯಿಂದ ಮಕ್ಕಳನ್ನು ತಂದೆತಾಯಿಗಳು ಕರೆತರುವುದು ಸಾಮಾನ್ಯ. ಆದರೆ ಈ ‘ಕಡಿಮೆ ಅಂಕ’ ಎಂಬ ಕಾಯಿಲೆಯ ಹಿಂದೆ ಹಲವಾರು ಕಾರಣಗಳು ಇರಲು ಸಾಧ್ಯವಿದೆ. ಆ ಕಾರಣಗಳನ್ನು ಗುರುತಿಸದೆ, ಪರಿಹರಿಸದೆ, ಅಂಕಗಳನ್ನು ಹೇಗಾದರೂ ಹೆಚ್ಚಿಸಲು ಪ್ರಯತ್ನಿಸಿದರೆ ನಿರಾಸೆ, ವೈಫಲ್ಯ ಕಟ್ಟಿಟ್ಟ ಬುತ್ತಿ. ಹಾಗಾಗಿ, ‘ಕಡಿಮೆ ಅಂಕ’ಗಳ ಹಿಂದಿನ ಕಾರಣಗಳನ್ನು ಮೊದಲು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು ಸೂಕ್ತ.

ಪೋಷಕರು ಮಕ್ಕಳನ್ನು ಮಾನಸಿಕ ತಜ್ಞರ ಬಳಿಗೆ ಕರೆತರುವ ಕಾರಣಗಳು ಸಾಮಾನ್ಯವಾಗಿ ಹೀಗಿರುತ್ತವೆ.

- ನನ್ನ ಮಗ ನಿಜವಾಗಿ ಬುದ್ಧಿವಂತ, ಆದರೆ ಅಂಕಗಳು ಮಾತ್ರ ಬರುತ್ತಿಲ್ಲ.
- ಬುದ್ಧಿವಂತ, ಬೇರೆಲ್ಲದರಲ್ಲಿ ಬುದ್ಧಿ ಇದೆ, ಆದರೆ ಕುಳಿತು ಓದುವುದಿಲ್ಲ, ಹಾಗಾಗಿ ಅಂಕಗಳು ಬರುತ್ತಿಲ್ಲ.
- ಇತ್ತೀಚೆಗೆ ತಲೆನೋವು/ಹೊಟ್ಟೆನೋವು ಬಹು ಹೆಚ್ಚಾಗಿದೆ. ಕಳೆದ ಒಂದು ತಿಂಗಳಿಂದ ಶಾಲೆಗೆ ಹೋಗಿಲ್ಲ. ಶಾಲೆಗೆ ಹೋದರೂ, ಅಧ್ಯಾಪಕರೇ ಇವನು ನರಳುವುದನ್ನು ನೋಡಿ, ‘ಗುಣವಾದ ಮೇಲೆಯೇ ಕಳಿಸಿ’ ಎಂದು ವಾಪಸ್ ಕಳಿಸಿದ್ದಾರೆ.
- ಎಲ್ಲವನ್ನೂ ಕಂಪ್ಯೂಟರ್ /ಮೊಬೈಲ್‌ನಲ್ಲಿ ಟೈಪ್ ಮಾಡಿ, ಈಗ ಬರೆಯುವುದಕ್ಕೆ ಹಟ ಮಾಡುತ್ತಿದ್ದಾಳೆ. ಅವಳ ಕೈಲಿ ಬರೆಸಬೇಕೆಂದರೆ ಬಲು ಕಷ್ಟದ ಕೆಲಸ. ಹಾಗಾಗಿ ನಾವೇ ಹೋಂವರ್ಕ್ ಬರೆದುಕೊಡುತ್ತಿದ್ದೇವೆ!
- ಮಗನಿಗೆ ಪರೀಕ್ಷೆ ಬರೆಯಲು ಆನ್‌ಲೈನ್‌ನಲ್ಲಿ `ಕಾನ್ಫಿಡೆನ್ಸ್' ಹೆಚ್ಚಿತ್ತು. ಏಕೆಂದರೆ ಬರದಿದ್ದರೆ, ನೋಡಿ/ಕೇಳಿ ಬರೆಯುವುದು ಸಾಧ್ಯ ಅಂತ. ಈಗ ಉತ್ತರ ಬರೆಯಲು ಗೊತ್ತಾಗದಿದ್ದರೆ ಎಂಬ ಚಿಂತೆಗೆ, ಅವನು ಶಾಲೆಗೆ ಹೋಗಲು ಸಿದ್ಧನಿಲ್ಲ.
- ಸದಾ ಮಾಸ್ಕ್ ಹಾಕಿಕೊಂಡಿದ್ದರೆ ಉಸಿರು ಕಟ್ಟಿದಂತಾಗುತ್ತದೆ ಎಂಬ ಕಾರಣಕ್ಕೆ ಮಗಳು ಶಾಲೆಗೆ ಹೋಗಲು ಬೇಸರಿಸುತ್ತಾಳೆ.
- ಇಲ್ಲಿಯವರೆಗೆ ಆರಾಮಾಗಿ ಆಟವಾಡುತ್ತಿದ್ದದ್ದು, ಬೇಕಾದಂತೆ ಏಳುತ್ತಿದ್ದದ್ದು, ಮಲಗುತ್ತಿದ್ದದ್ದು ಇವು ನಡೆಯುತ್ತಿಲ್ಲ. ಶಾಲೆಗೆ ಹೋಗುವುದು, ಪರೀಕ್ಷೆ ಬರೆಯುವುದು ಇವು ಏಕೆ ಬೇಕು ಎಂದು ಮಕ್ಕಳು ಕೇಳುತ್ತಾರೆ!

ಇವೆಲ್ಲ ಅಪ್ಪ ಅಮ್ಮ ತಮ್ಮ ಮಗ/ಮಗಳು/ ಇಬ್ಬರು ಮಕ್ಕಳನ್ನು `ಕಡಿಮೆ ಅಂಕ' ಎಂಬ ಮೇಲ್ನೋಟದ ಸಮಸ್ಯೆಗೆಂದು ಕರೆತಂದಾಗ, ಕೆದಕಿದಾಗ, ಸಿಗುವ ವಿವಿಧ ಅಂಶಗಳು. ಇವುಗಳಲ್ಲಿ ಕೆಲವು ಕೋವಿಡ್‌ಗೆ ಮೊದಲೇ ಇದ್ದಂತಹವು. ಮತ್ತೆ ಕೆಲವು ಕೋವಿಡ್ ನಂತರದಲ್ಲಿ ಹೊಸ ಸವಾಲುಗಳಾಗಿ ನಿಂತಿರುವಂತಹವು.

‘ಕಡಿಮೆ ಅಂಕ' ಎಂಬ ಸಮಸ್ಯೆಗೆ ಈ ಮೊದಲು ನಾವು ಗುರುತಿಸಿದ್ದ, ಪ್ರಸಿದ್ಧವಾಗಿದ್ದ ಕಾರಣವೆಂದರೆ ಕಲಿಕೆಯ ಅಸಮರ್ಥತೆ (**Learning disability**) ಎಂಬ ಮೆದುಳಿನ ತೊಂದರೆ. ಬುದ್ಧಿಮತ್ತೆಯಲ್ಲಿಯೇ ಕೊರತೆಯಿರುವ ಬುದ್ಧಿಮಾಂದ್ಯತೆಯಾಗಲಿ, ಬರೆಹ

